363 (231) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮೈಸೂರು ರಸ್ತೆಯ ಬ್ಯಾಟರಾಯನಪುರದ ಬಳಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಟರ್ಮಿನಲ್ ನಿರ್ಮಿಸುತ್ತಿದೆಯೇ;

ಆ) ಈ ಬಸ್ ಟರ್ಮಿನಲ್‌ನಲ್ಲಿ ಒದಗಿಸಲಿರುವ ಸೌಲಭ್ಯಗಳು ಯಾವುವು;

ಇ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಕಾಮಗಾರಿ ಯಾವಾಗ ಪ್ರಾರಂಭವಾಯಿತು;

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;

ಉ) ಇದರ ವಿಳಂಬವಾಗಲು ಕಾರಣಗಳೇನು;

ಊ) ಈ ಟರ್ಮಿನಲ್‌ನಿಂದ ಯಾವ ಯಾವ ಜಾಗಗಳಿಗೆ ಎಷ್ಟು ಬಸ್‌ಗಳು ಸಂಚರಿಸುತ್ತವೆ;

ಋ) ಈ ಟರ್ಮಿನಲ್ ಯಾವಾಗ ಕಾರ್ಯಾರಂಭಗೊಳ್ಳುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಹೌದು.

ಆ) 1) ಸುಸಜ್ಜಿತ ಬಸ್ ನಿಲ್ದಾಣ, ಆಧುನಿಕ ಶೌಚಾಲಯ, ಉಪಹಾರ ಗೃಹ, ಯಾತ್ರಿ ನಿವಾಸ ಇನ್ನಿತರೆ ಸೌಲಭ್ಯಗಳನ್ನು ಒಳಗೊಂಡಂತೆ.

2) ನಗರ ಸಾರಿಗೆ ಬಸ್ ನಿಲ್ದಾಣ.

3) ಬಸ್ ಘಟಕ.

4) ಕಾರ್ ಪಾರ್ಕಿಂಗ್ ಮತ್ತು ದ್ವಿಚಕ್ರ ವಾಹನ ನಿಲ್ದಾಣ.

5) ವಾಣಿಜ್ಯ ಮಳಿಗೆಗಳು.

ಇ) • 20.00 ಕೋಟಿಗಳು.

• ದಿನಾಂಕ: 15.09.2003ರಲ್ಲಿ ಪ್ರಾರಂಭವಾಗಿದೆ.

ಈ) ದಿನಾಂಕ:31.12.2004ಕ್ಕೆ ಪೂರ್ಣಗೊಳ್ಳಬೇಕಾಗಿತ್ತು.

ಉ) 1) ಮೈಸೂರು ಕ್ರೋಮ್ ಟ್ಯಾನಿಂಗ್ ಕಂ. ಸೇರಿದ ಫ್ಯಾಕ್ಟರಿಯನ್ನು ತೆರವು ಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

2) ಆರ್ಥಿಕ ಪರಿಸ್ಥಿತಿಯಿಂದಾಗಿ ಬಿಲ್ಲುಗಳನ್ನು ಪಾವತಿಸುವುದರಲ್ಲೂ ಸಹ ವಿಳಂಬವಾಗಿರುತ್ತದೆ.

ಊ) ಮೊದಲನೆ ಹಂತದಲ್ಲಿ ಒಟ್ಟು 61 ಬಸ್ಸುಗಳಲ್ಲಿ ಜಾಲಮಂಗಲ, ಚನ್ನಪಟ್ಟಣ, ಮಂಡ್ಯ,ಮಳವಳ್ಳಿ, ಕೊಳ್ಳೇಗಾಲ, ಟಿ.ನರಸೀಪುರ, ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆ, ಕೆ.ಆರ್.ನಗರ, ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು ಕುಶಾಲನಗರಕ್ಕೆ ಆಚರಣೆ ಮಾಡಲಾಗುವುದು.

ಋ) ಏಪ್ರಿಲ್ 2005.

364 (235) ಶ್ರೀ ಸೋಮಣ್ಣ ವಿ.(ಬಿನ್ನಿಪೇಟೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇಲ್ಲಿಯವರೆಗೆ ಬೆಂಗಳೂರು ಹಾಗೂ ಸುತ್ತ ಮುತ್ತ ನಿರ್ಮಿಸಿರುವ ಬಡಾವಣೆಗಳು ಯಾವುವು;